HAF

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೇಂದ್ರ ಪುರಸ್ಕೃತ ಯೋಜನೆಯಡಿ ಉಡುಪಿ ಜಿಲ್ಲೆಯ ಹೆಜಮಾಡಿ ಕೋಡಿಯಲ್ಲಿ ಮೀನುಗಾರಿಕಾ ಬಂದರು ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ 2022-23ನೇ ಸಾಲಿನ ಪೂರಕ ಅಂದಾಜುಗಳು (ಮೊದಲನೇ ಕಂತು) ಮೀನುಗಾರಿಕೆ ಇಲಾಖೆಯ ಲೆಕ್ಕ ಶೀರ್ಷಿಕೆ 4405 ರಡಿ ಒದಗಿಸಲಾದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:-
1) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 33013-8/2010-ಎಫ್ ವೈ (ಹೆಚ್), ದಿನಾಂಕ: 13-08-2018.
2) ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/184/ಮೀಇಯೋ/2013, ದಿನಾಂಕ: 20-02-2020.
3) ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/184/ಮೀಇಯೋ/2013, ದಿನಾಂಕ: 10-07-2020.
4) ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/184/ಮೀಇಯೋ/2013, ದಿನಾಂಕ: 24-08-2020.
5) ಸರ್ಕಾರದ ಪತ್ರ ಸಂಖ್ಯೆ: ಪಸಂಮೀ/26/ಮೀಇಯೋ/2021, ದಿನಾಂಕ: 03-03-2021.
6) ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/26/ಮೀಇಯೋ/2021, ದಿನಾಂಕ: 23-06-2022.
7) ಸರ್ಕಾರದ ಪತ್ರ ಸಂಖ್ಯೆ: ಪಸಂಮೀ/ಇ-26/ಮೀಇಯೋ/2021, ದಿನಾಂಕ: 20-08-2022.
8) ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ: ಆಇ/03/ಬಿಎಸ್‌ಜಿ/2022, ದಿನಾಂಕ: 19-10-2022.
9) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರ ಏಕ ಕಡತ ಪತ್ರ ಸಂಖ್ಯೆ: DoF-ADMNOBGT/21/2022, ದಿನಾಂಕ: 04-11-2022.

******

## ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಕೇಂದ್ರ ಸರ್ಕಾರದ ಪತ್ರದಲ್ಲಿ, ಉಡುಪಿ ಜಿಲ್ಲೆಯ ಹೆಜಮಾಡಿ ಕೋಡಿಯಲ್ಲಿ ಮೀನುಗಾರಿಕೆ ಬಂದರನ್ನು ರೂ.138.60 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಮಂಜೂರಾತಿ ನೀಡಿ ತನ್ನ ಪಾಲಿನ ಪ್ರಥಮ ಕಂತಿನ ಅನುದಾನವಾಗಿ ರೂ.13.86 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ, ಉಡುಪಿ ಜಿಲ್ಲೆಯ ಹೆಜಮಾಡಿಕೋಡಿಯಲ್ಲಿ ಮೀನುಗಾರಿಕೆ ಬಂದರು ನಿರ್ಮಾಣ ಕಾಮಗಾರಿಯನ್ನು ಕೇಂದ್ರದ ಪಾಲು ರೂ.69.30 ಕೋಟಿಗಳನ್ನು ಕೇಂದ್ರ ಸರ್ಕಾರದಿಂದ ಹಾಗೂ ರಾಜ್ಯದ ಪಾಲು ರೂ.111.54 ಕೋಟಿ (ಈಗಾಗಲೇ ಅನುಮೋದನೆ ನೀಡಿರುವ ಮೊತ್ತ ರೂ.69.30 ಕೋಟಿ + ಪರಿಷ್ಕೃತ ಅಂದಾಜಿನಂತೆ ಹೆಚ್ಚುವರಿ ಮೊತ್ತ ರೂ.29.00 ಕೋಟಿ + ಭೂಸ್ವಾಧೀನ ಪ್ರಕ್ರಿಯೆ ಮೊತ್ತ ರೂ.13.24 ಕೋಟಿ)ಗಳನ್ನು ರಾಜ್ಯ ಸರ್ಕಾರದಿಂದ ಹೀಗೆ ಒಟ್ಟು ರೂ.180.84 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿತ್ತು.

ಉಡುಪಿ ಜಿಲ್ಲೆಯ ಹೆಜಮಾಡಿ
ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಆದೇಶದಲ್ಲಿ, ಸ್ವಾಧೀನಪಡಿಸಿ
ಕೋಡಿಯಲ್ಲಿ ಮೀನುಗಾರಿಕೆ ಬಂದರು ನಿರ್ಮಾಣಕ್ಕಾಗಿ ಜಮೀನನ್ನು 2020-21 ನೇ ಸಾಲಿನ ಆಯವ್ಯಯದಲ್ಲಿ
ಕೊಳ್ಳಲು ಪ್ರಸ್ತಾಪಿಸಿರುವ ರೂ.1324.00 ಲಕ್ಷಗಳನ್ನು ಅನುದಾನದಿಂದ ಬಿಡುಗಡೆ
ಲೆಕ್ಕ ಶೀರ್ಷಿಕೆ 4405-00-103-6-01 ರಡಿ ಒದಗಿಸಿರುವ
ಮಾಡಲಾಗಿತ್ತು.

ಉಡುಪಿ ಜಿಲ್ಲೆಯ ಹೆಜಮಾಡಿ
ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ಆದೇಶದಲ್ಲಿ, ಮೀನುಗಾರಿಕೆ
ಕೋಡಿಯಲ್ಲಿ ಮೀನುಗಾರಿಕೆ ಬಂದರು ನಿರ್ಮಾಣಕ್ಕಾಗಿ ಖಾಸಗಿ ಜಮೀನನ್ನು 4405-00-103-6-01 (139) ರಡಿಯಲ್ಲಿ
ಇಲಾಖೆಯಿಂದಲೇ ಖರೀದಿಸಲು ಲೆಕ್ಕ ಶೀರ್ಷಿಕೆ ಪೇಯೀಸ್ ರಸೀದಿ ಮೂಲಕ ರಾಜ್ಯ
ಬಿಡುಗಡೆ ಆಗಿರುವ ಮೊತ್ತ ರೂ.13.24 ಕೋಟಿಗಳನ್ನು ನಿರ್ದೇಶಕರ ಖಾತೆಗೆ ಜಮೆ ಮಾಡಲು
ಹುಜೂರ್ ಖಜಾನೆಯಿಂದ ಸೆಳೆದು ಮೀನುಗಾರಿಕೆ
ಅನುಮತಿ ನೀಡಲಾಗಿತ್ತು.

ಕೇಂದ್ರ ಪುರಸ್ಕೃತ ಯೋಜನೆಯಡಿ
ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಪತ್ರದಲ್ಲಿ, ನಿರ್ಮಾಣ
ಗಂಗೊಳ್ಳಿ ಮೀನುಗಾರಿಕೆ ಬಂದರಿನಲ್ಲಿ ಬ್ರೇಕ್ ವಾಟರ್ (2ನೇ ಹಂತದ ಅಭಿವೃದ್ಧಿ) ಉತ್ತರ ಕನ್ನಡ
ಕಾಮಗಾರಿಗೆ ರಾಜ್ಯದ ಪಾಲಿನ ಅನುದಾನ ರೂ.500.00 ಲಕ್ಷಗಳು ಹಾಗೂ ಇಳಿದಾಣ
ಜಿಲ್ಲೆಯ ಭಟ್ಕಳ ತಾಲ್ಲೂಕಿನ ಅಳ್ವೆಕೋಡಿ-ತಂಗಿನಗುಂಡಿ ಮೀನುಗಾರಿಕೆ ಕೇಂದ್ರದ
ಕೇಂದ್ರಗಳ ಅಭಿವೃದ್ಧಿಗಾಗಿ ಬ್ರೇಕ್ ವಾಟರ್ ನಿರ್ಮಾಣ ಕೈಗೊಳ್ಳಲು ರಾಜ್ಯ ಮತ್ತು ಲಕ್ಷಗಳನ್ನು,
ಪಾಲಿನ ಅನುದಾನ ರೂ.294.00 ಲಕ್ಷಗಳು ಸೇರಿ ಒಟ್ಟಾರೆಯಾಗಿ ರೂ.794.00 ಹೆಜಮಾಡಿಕೋಡಿಯಲ್ಲಿ
ಈಗಾಗಲೇ ಕೇಂದ್ರ ಪುರಸ್ಕೃತ ಯೋಜನೆಯಡಿ ಉಡುಪಿ ಜಿಲ್ಲೆಯ ರೂ.1324.00 ಲಕ್ಷಗಳಿಂದ
ಮೀನುಗಾರಿಕೆ ಬಂದರು ನಿರ್ಮಾಣಕ್ಕಾಗಿ ಬಿಡುಗಡೆಯಾಗಿರುವ
ಉಪಯೋಗಿಸಿಕೊಳ್ಳಲು ಅನುಮತಿ ನೀಡಲಾಗಿದೆ

ಕೇಂದ್ರ ಪುರಸ್ಕೃತ
ಮೇಲೆ ಕ್ರಮ ಸಂಖ್ಯೆ (6)ರಲ್ಲಿ ಓದಲಾದ ಆದೇಶದಲ್ಲಿ, ಮೀನುಗಾರಿಕಾ ಬಂದರು
ಯೋಜನೆಯಡಿ ಉಡುಪಿ ಜಿಲ್ಲೆಯ ಹೆಜಮಾಡಿ ಕೋಡಿಯಲ್ಲಿ (ಅಗತ್ಯವಿರುವ
ನಿರ್ಮಾಣ ಕಾಮಗಾರಿ ಕೈಗೊಳ್ಳುವ ಸಂಬಂಧದ ರೂ.188.73 ಕೋಟಿ ಕೋಟಿಗಳಿಂದ
ಜಮೀನಿನ ಭೂಸ್ವಾಧೀನಕ್ಕಾಗಿ ಮೀಸಲಿಟ್ಟಿದ್ದ ರಾಜ್ಯದ ಪಾಲು ರೂ.13.24 ಮೊತ್ತಕ್ಕೆ
ರೂ.21.13 ಕೋಟಿಗಳಿಗೆ ಹೆಚ್ಚಳವಾಗಿದ್ದರಿಂದ)ಗಳ ಪರಿಷ್ಕೃತ ಅಂದಾಜು
ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿರುತ್ತದೆ.

ಸದರಿ ಕಾಮಗಾರಿಗೆ
ಮೇಲೆ ಕ್ರಮ ಸಂಖ್ಯೆ (7)ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ, ಲೆಕ್ಕ ಶೀರ್ಷಿಕೆ
ಕೇಂದ್ರ ಸರ್ಕಾರವು ಬಿಡುಗಡೆಗೊಳಿಸಿರುವ (ಶೇ.50) ರೂ.1386.00 ಲಕ್ಷಗಳನ್ನು ರಾಜ್ಯದ ಪಾಲಿನ (ಶೇ.50)
4405 00-103-6-01-139 ರಡಿ ಹಾಗೂ ಅನುದಾನಕ್ಕನುಗುಣವಾಗಿ. ಭೂಸ್ವಾಧೀನಗೊಳಿಸಲು
ಅನುದಾನ ರೂ.1386.00 ಲಕ್ಷಗಳು ಮತ್ತು ಖಾಸಗೀ ಜಮೀನನ್ನು ಲೆಕ್ಕ ಶೀರ್ಷಿಕೆ 4405-
ಅವಶ್ಯವಿರುವ ರೂ.1902.00 ಲಕ್ಷಗಳು ಒಟ್ಟು ರೂ.3288.00 ಲಕ್ಷಗಳನ್ನು ಪ್ರಸಕ್ತ ಸಾಲಿನ ಪೂರಕ
00-103-6-02-139 ರಡಿ ಒಟ್ಟಾರೆಯಾಗಿ ರೂ. 4674.00 ಲಕ್ಷಗಳನ್ನು ತಿಳಿಸಲಾಗಿತ್ತು.
ಅಂದಾಜು-1 ರಲ್ಲಿ ಹೆಚ್ಚುವರಿಯಾಗಿ ಒದಗಿಸಲು ಕ್ರಮವಹಿಸಲಾಗುವುದೆಂದು

ಮೇಲೆ ಕ್ರಮ ಸಂಖ್ಯೆ (8) ರಲ್ಲಿ ಓದಲಾದ ಆರ್ಥಿಕ ಇಲಾಖೆಯ ಪತ್ರದಲ್ಲಿ 2022-23ನೇ ಸಾಲಿನ ಪೂರಕ ಅಂದಾಜುಗಳು (ಮೊದಲನೆ ಕಂತು) ಅಭಿಯಾಚನೆ ಸಂಖ್ಯೆ ಕ್ರಮಾಂಕ 2 ಬಾಬ್ತು ಸಂಖ್ಯೆ 9 ರಲ್ಲಿ ಲೆಕ್ಕ ಶೀರ್ಷಿಕೆ 4405-00-103-6-01-139 –ಪ್ರಧಾನ ಕಾಮಗಾರಿಗಳು ಅಡಿ ಕೇಂದ್ರದ ಪಾಲು ರೂ.1386.00 ಲಕ್ಷಗಳನ್ನು ಹಾಗೂ ಲೆಕ್ಕ ಶೀರ್ಷಿಕೆ 4405-00-103-6-02-139 ರಡಿ ರಾಜ್ಯದ ಪಾಲು ರೂ.3288.00 ಲಕ್ಷಗಳನ್ನು ಹೀಗೆ ಒಟ್ಟಾರೆ ರೂ.4674.00 ಲಕ್ಷಗಳನ್ನು ಹೆಚ್ಚುವರಿಯಾಗಿ ಒದಗಿಸಲಾಗಿದೆ.

ಅದರಂತೆ, ಮೇಲೆ ಕ್ರಮ ಸಂಖ್ಯೆ (9) ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಏಕ ಕಡತ ಪತ್ರದಲ್ಲಿ, 2022-23ನೇ ಸಾಲಿನ ಪೂರಕ ಅಂದಾಜುಗಳು (ಮೊದಲನೇ ಕಂತು) ಮೀನುಗಾರಿಕೆ ಇಲಾಖೆಯ ಲೆಕ್ಕ ಶೀರ್ಷಿಕೆ 4405-00-103-6-01 ಮತ್ತು 4405-00-103-6-02 ರಡಿ ಈ ಕೆಳಕಂಡಂತೆ ಒದಗಿಸಲಾದ ಅನುದಾನ ಬಿಡುಗಡೆ ಮಾಡುವಂತೆ ನಿರ್ದೇಶಕರು ಕೋರಿರುತ್ತಾರೆ.

| ಕ್ರ. ಸಂ. | ಯೋಜನೆಯ ಹೆಸರು | ಲೆಕ್ಕ ಶೀರ್ಷಿಕೆ | ಪೂರಕ ಅಂದಾಜುಗಳು-2022-23 (ಮೊದನಲನೇ ಕಂತು) ಒದಗಿಸಲಾದ ಅನುದಾನ |
|---|---|---|---|
| 1) | ಕೇ.ಪು.ಯೋ- ಕೇಂದ್ರದ ಪಾಲು – ಮೀನುಗಾರಿಕೆ ಬಂದರುಗಳ ನಿರ್ಮಾಣ | 4405-00-103-6-01-139 | 1386.00 |
| 2) | ಕೇ.ಪು.ಯೋ- ರಾಜ್ಯದ ಪಾಲು – ಮೀನುಗಾರಿಕೆ ಬಂದರುಗಳ ನಿರ್ಮಾಣ | 4405-00-103-6-02-139 | 3288.00 |

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಕಾಮಗಾರಿಗೆ 2022-23ನೇ ಸಾಲಿನ ಪೂರಕ ಅಂದಾಜುಗಳು (ಮೊದಲನೇ ಕಂತು) ಮೀನುಗಾರಿಕೆ ಇಲಾಖೆಯ ಲೆಕ್ಕ ಶೀರ್ಷಿಕೆ 4405-00-103-6-01-139 ರಡಿ ರೂ.1386.00 ಲಕ್ಷ ಮತ್ತು 4405-00-103-6-02-139 ರಡಿ ರೂ.3288.00 ಲಕ್ಷ (ರೂ.1386.00 ಲಕ್ಷ + ರೂ.1902.00 ಲಕ್ಷ) ರಡಿ ಒದಗಿಸಲಾದ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿ, ಕೆಳಕಂಡಂತೆ ಆದೇಶಿಸಿದೆ.

**<u>ಆದೇಶ ಸಂಖ್ಯೆ: ಪಸಂಮೀ ಇ-26 ಮೀಇಯೋ 2021, ಬೆಂಗಳೂರು ದಿನಾಂಕ: 05-11-2022</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕೇಂದ್ರ ಪುರಸ್ಕೃತ ಯೋಜನೆಯಡಿ ಉಡುಪಿ ಜಿಲ್ಲೆಯ ಹೆಜಮಾಡಿ ಕೋಡಿಯಲ್ಲಿ ಮೀನುಗಾರಿಕಾ ಬಂದರು ನಿರ್ಮಾಣ ಕಾಮಗಾರಿ ಕೈಗೊಳ್ಳುವ ಸಂಬಂಧದ 2022-23ನೇ ಸಾಲಿನ ಪೂರಕ ಅಂದಾಜುಗಳು (ಮೊದಲನೇ ಕಂತು) ಮೀನುಗಾರಿಕೆ ಇಲಾಖೆಯ ಲೆಕ್ಕ ಶೀರ್ಷಿಕೆ 4405-00-103-6-01-139 ರಡಿ ರೂ.1386.00 ಲಕ್ಷಗಳನ್ನು ಮತ್ತು ಲೆಕ್ಕ ಶೀರ್ಷಿಕೆ 4405-00-103-6-02-139 ರಡಿ ರೂ.3288.00 ಲಕ್ಷಗಳನ್ನು (ರೂ.1386.00 ಲಕ್ಷ + ರೂ.1902.00 ಲಕ್ಷ) ಹೀಗೆ ಒಟ್ಟು ರೂ.4674.00 ಲಕ್ಷ (ನಾಲ್ಕು ಸಾವಿರದ ಆರುನೂರ ಎಪ್ಪತ್ತನಾಲ್ಕು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಬಿಡುಗಡೆಗೊಳಿಸಿ ಆದೇಶಿಸಲಾಗಿದೆ.

ಈ ಅನುದಾನವನ್ನು ನಿಯಮಾನುಸಾರ ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಉಪಯೋಗಿಸಿಕೊಂಡು ಕಡ್ಡಾಯವಾಗಿ ಹಣ ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಖ2/ಪಿಎಂಯು/92/2015-16, ದಿನಾಂಕ: 27-03-2018ರ ಕ್ರಮ ಸಂಖ್ಯೆ 01 ರಿಂದ 04 ರಲ್ಲಿ ಸೂಚಿಸಿರುವಂತೆ ಅನುಷ್ಠಾನಗೊಳಿಸತಕ್ಕದ್ದು.

ಈ ಯೋಜನೆಗೆ ಸಂಬಂಧಪಟ್ಟ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಕಂದಾಯ ಇಲಾಖೆಯಿಂದ ಸಲ್ಲಿಸಿರುವ ಲೆಕ್ಕಾಚಾರದ ತಃಖ್ತೆಯನ್ನು ಪರಿಶೀಲಿಸಿಕೊಂಡು ಕ್ರಮವಹಿಸುವುದು.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 ಮತ್ತು ನಿಯಮಗಳು 2000ಗಳನ್ನು ಹಾಗೂ ಖರೀದಿ ನಿಯಮಗಳನ್ನು ಪಾಲಿಸತಕ್ಕದ್ದು.

ಯಾವುದೇ ಕಾರಣಕ್ಕಾಗಿ ಪೂರಕ ಅಂದಾಜುಗಳಲ್ಲಿ ಒದಗಿಸಿರುವ ಮೊತ್ತವನ್ನು ಭಾಗಶಃ ಅಥವಾ ಪೂರ್ಣವಾಗಿ ಉಪಯೋಗಿಸಲು ಆಗದಿದ್ದಲ್ಲಿ, ದಿನಾಂಕ: 31-03-2023 ರ ಒಳಗಾಗಿ ತಪ್ಪದೇ ಅಧ್ಯರ್ಪಣೆ ಮಾಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್ ಡಿ/1/ಟಿಎಫ್ ಪಿ/2022, ದಿನಾಂಕ: 23-09-2022 ರಲ್ಲಿ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ವಿತ್ತಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಕೆ.ಎಂ. ಶುಭಶ್ರೀ 5.11.2022.
(ಕೆ.ಎಂ. ಶುಭಶ್ರೀ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
TC 05.11.2022 (ಮೀನುಗಾರಿಕೆ)

ಇವರಿಗೆ

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ)(ಇ&ಆರ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸಸೌಧ, ಬೆಂಗಳೂರು.
4. ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ, ಉಡುಪಿ.
5. ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
6. ನಿರ್ದೇಶಕರು, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೈತಖೋಲ, ಕಾರವಾರ.
7. ಮೀನುಗಾರಿಕೆ ಜಂಟಿ ನಿರ್ದೇಶಕರು, ಉಡುಪಿ.

8. ಜಂಟಿ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
9. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ, ತೋಟಗಾರಿಕೆ ಮತ್ತು ಪಸಂಮೀ ಇಲಾಖೆ.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
11. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
12. ಸಂಬಂಧಪಟ್ಟವರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
13. ಕಂಟ್ರೋಲ್ ರೂಮ್-ಕಂ-24x7 ಹೆಲ್ಪ್ ಲೈನ್ (ಸಹಾಯವಾಣಿ), ಮೀನುಗಾರಿಕೆ ಇಲಾಖೆ.
14. ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು / ಸಮನ್ವಯ-ಕಂಪೆಂಡಿಯಂ.

## ಪ್ರತಿಯನ್ನು

1) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಗಳು / ಜಂಟಿ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು, ಪಸಂಮೀ ಇಲಾಖೆ, ವಿಕಾಸಸೌಧ, ಬೆಂಗಳೂರು.